


## ಸ್ಟೀಮ್

ಇದು ಆನ್‌ಲೈನ್ ಕಂಪ್ಯೂಟರ್ ಗೇಮ್ ಆಗಿದ್ದು, ಅತ್ಯಂತ ಬೃಹತ್ತಾದ ಮಾರುಕಟ್ಟೆ ಹೊಂದಿದೆ. ದೊಡ್ಡದಾದ ಲೈಬ್ರರಿ ಹೊಂದಿದ್ದು, ಬಿಗ್ ಪಿಕ್ಚರ್ ಹಾಗೂ ಸಾಲಿಡ್ ಮಲ್ಟಿಪ್ಲೇಯರ್ ವಿಶೇಷತೆಗಳಿವೆ. ಕುಟುಂಬದವರು, ಸ್ನೇಹಿತರ ಜೊತೆ ಶೇರ್ ಮಾಡಬಹುದು. ಗೇಮ್‌ನ ಸ್ಟ್ರೀಮಿಂಗ್ ಕೂಡಾ ಲಭ್ಯ. ಗೇಮ್ ಕುರಿತಂತೆ ಸುದ್ದಿಯನ್ನೂ ಓದಬಹುದು. ಜೊತೆಗೆ ಇದು ಆ್ಯಪ್ ಆಗಿಯೂ ಬಳಕೆಯಾಗುತ್ತದೆ. ಚ್ಯಾಟ್‌ಗೆ ವೇದಿಕೆಯನ್ನೂ ಕಲ್ಪಿಸುತ್ತದೆ. ಗೂಗ್ಲ್ ಇರುವ ಸ್ಮಾರ್ಟ್‌ಫೋನ್ ಹಾಗೂ ಟ್ಯಾಬ್ಲೆಟ್‌ಗಳಲ್ಲಿ ರಿಮೋಟ್ ಡೌನ್‌ಲೋಡ್ ಸೌಲಭ್ಯವೂ ಇದೆ.

## ಮೈಕ್ರೋಸಾಫ್ಟ್ ಟ್ರಾನ್ಸ್‌ಲೇಟರ್

ನಿಮಗೆ ವಿದೇಶದಲ್ಲಿ ಭಾಷೆಯ ಸಮಸ್ಯೆಯಾದರೆ ಈ ಆ್ಯಪ್ ಭಾಷಾಂತರ ಮಾಡುವ ಮೂಲಕ ನಿಮ್ಮ ನೆರವಿಗೆ ನಿಲ್ಲುತ್ತದೆ. ಒಟ್ಟು 9 ಭಾಷೆಗಳನ್ನು ಇದು ಭಾಷಾಂತರ ಮಾಡುತ್ತದೆ. ನಿಮಗೆ ಮಾರ್ಗದರ್ಶಿಯ ಅಗತ್ಯವೂ ಇಲ್ಲ. ಇದು ಆ್ಯಪಲ್ ಮತ್ತು ಆ್ಯಂಡ್ರಾಯ್ಡ್ ಎರಡರಲ್ಲೂ ಕಾರ್ಯ ನಿರ್ವಹಿಸುತ್ತದೆ.  ಇದು ಕೃತಕ ಬುದ್ಧಿಮತ್ತೆಯ ಒಂದು ರೂಪವಾಗಿದ್ದು, ಒಟ್ಟಿಗೆ ಒಂದು ನೂರು ಜನರ ಜೊತೆ ಸಂಭಾಷಣೆ ನಡೆಸಲು ಸಾಧ್ಯ. ಮಾನವ ಮೆದುಳಿನ ಸ್ವರೂಪದ ಮೇಲೆ ಮಷಿನ್ ಕಲಿಕೆಯ ಜಾಲವನ್ನು ಶೋಧಿಸಲಾಗಿದ್ದು, ನ್ಯೂರಲ್ ನೆಟ್‌ವರ್ಕ್ ಎಂಬ ಹೆಸರು ನೀಡಲಾಗಿದೆ.



## ಆ್ಯಪಲ್‌ನ ಟಿವಿ ಆ್ಯಪ್

ಆ್ಯಪಲ್‌ನ ಈ ಹೊಸ ಆ್ಯಪ್ ಆ್ಯಪಲ್ ಟಿವಿಯಲ್ಲದೇ ಐಫೋನ್, ಐಪ್ಯಾಡ್‌ಗಳಲ್ಲೂ ಲಭ್ಯವಿದೆ. ಇದರ ಮೂಲಕ ಟಿವಿ ಶೋ ಹಾಗೂ ಚಲನಚಿತ್ರಗಳನ್ನು ಹುಡುಕಬಹುದು. ಇದು ನಾಲ್ಕು ವಿಭಾಗಗಳನ್ನು ಹೊಂದಿದ್ದು, ಇವುಗಳೆಂದರೆ ವಾಚ್ ನೌ, ಲೈಬ್ರರಿ, ಸ್ಟೋರಿ ಹಾಗೂ ಸರ್ಚ್. ವಾಚ್ ನೌ ಅರ್ಧಕ್ಕೆ ಬಿಟ್ಟ ಚಲನಚಿತ್ರವನ್ನು ನೋಡಲು ಅವಕಾಶ ಮಾಡಿಕೊಡುತ್ತದೆ. ನಿಮ್ಮ ಹಿಂದಿನ ಚಟುವಟಿಕೆಗಳ ಆಧಾರದ ಮೇಲೆ ಹೊಸ ಶೋಗಳ ಬಗ್ಗೆ ಸಲಹೆ ನೀಡುತ್ತದೆ. ಇದಕ್ಕೆ ಸಿರಿ ಸೌಲಭ್ಯವಿದ್ದು, ಅರ್ಧಕ್ಕೆ ಬಿಟ್ಟ ಸಿನಿಮಾ ಮುಂದುವರಿಸುವಂತೆ  ಅಥವಾ ನಿಮಗೆ ಇಷ್ಟವಾದ ಶೋ ಯಾವುದಿದೆ ಎಂದು ಕೇಳಬಹುದು.







## ಟ್ರೇಮ್

ಈ ಆ್ಯಪ್ ನಿಮ್ಮ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ಗಳನ್ನು ಕೆಲವೇ ಮಂದಿ ಮಾತ್ರ ನೋಡಲು ಅವಕಾಶ ನೀಡುತ್ತದೆ. ಉದಾಹರಣೆಗೆ ಫೇಸ್‌ಬುಕ್. ಇದು ನಿಮಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಗ್ರಹಿಸಿಟ್ಟುಕೊಂಡು ಅವುಗಳನ್ನು ಜಾಹೀರಾತುದಾರರಿಗೆ ನೀಡುತ್ತದೆ. ನೀವು ಫೇಸ್‌ಬುಕ್ ಬಳಸಿ ಪೋಸ್ಟ್‌ಗಳನ್ನು, ಲೈಕ್‌ಗಳನ್ನು ಮಾಡಿದರೆ, ಅದು ಜಾಹೀರಾತಿನ ಮೂಲಕ ಹಣ ಮಾಡುತ್ತದೆ. ನಿಯಮಿತ ಬಳಕೆದಾರರು ಕೂಡಾ ಇದರಲ್ಲಿ ಶೇ. 20ರಷ್ಟು ಪಾಲುದಾರಿಕೆ ಪಡೆಯಲು ಈ ಟ್ರೇಮ್ ಆ್ಯಪ್ ನೆರವಾಗುತ್ತದೆ. ಅಂದರೆ ನಿಮ್ಮ ಪೋಸ್ಟ್‌ಗಳನ್ನು ನೋಡಲು ಕೆಲವೇ ಮಂದಿಗೆ ಮಾತ್ರ ಅವಕಾಶ ನೀಡುವ ಆಯ್ಕೆ ನಿಮಗೇ ಇದೆ. ಇದನ್ನು ಸ್ನ್ಯಾಪ್‌ಚ್ಯಾಟ್, ಇನ್‌ಸ್ಟಾಗ್ರಾಮಿನಲ್ಲೂ ಬಳಸಬಹುದು.

■ ಎಸ್. ತುಂಬೆ